ಇಂದು ದಿಃ **06-07-2024** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್.ಎ.ಕೆ ವಕೀಲರಿಂದ ಪ್ರತಿವಾದಿಗಳ ಪರಃ**

ನಾನು 5 ನೇ ತರಗತಿಯವರೆಗೆ ಓದಿದ್ದೇನೆ. ನಾನು ತೋಟಗಂಟೆ ಶಾಲೆಯಲ್ಲಿ ಓದಿದ್ದೇನೆ. ಅದು ನನ್ನ ಹೆಂಡತಿಯ ತವರು ಮನೆ ಎಂದರೆ ಸರಿ. ನಾನು ಚಿಕ್ಕವನಿದ್ದಾಗಿನಿಂದ ಅಲ್ಲಿಯೇ ವಾಸ ಇದ್ದೆನು. ನನ್ನ ತಂದೆ ಯಾವಾಗ ತೀರಿಕೊಂಡರು ಎಂದು ಗೊತ್ತಿಲ್ಲ. ನಾನು ಆತ ತೀರಿಕೊಂಡ 16 ದಿನಗಳ ನಂತರ ಹುಟ್ಟಿರುತ್ತೇನೆ. ನನ್ನ ಜನ್ಮ ಇಸವಿ 1952 ಇರುತ್ತದೆ. ನನ್ನ ತಾಯಿ 1978 ರಲ್ಲಿ ತೀರಿಕೊಂಡರು ಎಂದರೆ ನನಗೆ ನೆನಪಿಲ್ಲ. 1974 ರಲ್ಲಿ ನನ್ನ ಮತ್ತು ಪ್ರತಿವಾದಿಯ ಮದುವೆಯಾಗಿರುತ್ತದೆ. ತೋಟಗಂಟಿಯಲ್ಲಿ ಆಗಿರುತ್ತದೆ. ಪ್ರತಿವಾದಿ ನನ್ನ ಸೋದರ ಮಾವನ ಮಗಳು ಎಂದರೆ ಸರಿ. ನನ್ನ ಮತ್ತು ನನ್ನ ಹೆಂಡತಿಯ ನಡುವೆ 1983 ರಲ್ಲಿ ಮನಸ್ತಾಪ ಬಂದಿರುತ್ತದೆ. ಯಾವ ವಿಷಯಕ್ಕೆ ಮನಸ್ತಾಪ ಆಯಿತು ಎಂದು ಹೇಳಲು ಬರುವುದಿಲ್ಲ. ಸಾಕ್ಷಿ ತಪ್ಪು ಕಲ್ಪನೆಯಾಗಿರುತ್ತದೆ ಎಂದು ಹೇಳುತ್ತಾರೆ. ನನ್ನ ಹೆಂಡತಿ ನನ್ನ ವಿರುದ್ದ ಯಾವುದೇ ವಿಚ್ಚೇದನ ಅಥವಾ ಜೀವನಾಂಶಕೇಳಿ ಯಾವುದೇ ಅರ್ಜಿ ಸಲ್ಲಿಸಿಲ್ಲ. ನಾನು ವಿವಾಹ ಜೀವನದ ಮರುಸ್ಥಾಪನೆಗೆ ಅರ್ಜಿ ಸಲ್ಲಿಸಿಲ್ಲ, ಆದರೆ ಆಕೆಯನ್ನು ಕರೆಯಲು ಹೋಗಿದ್ದೆನು. ನಾನು ಆಕೆಯನ್ನು ಕರೆಯಲು ಹೋದ ಬಗ್ಗೆ ವಾದಪತ್ರದಲ್ಲಿ ತಿಳಿಸಿಲ್ಲ. ಸುಮಾರು 20 ವರ್ಷ ನಾನು ಮತ್ತು ನನ್ನ ಹೆಂಡತಿ ಜೀವನ ಕೂಡಿ ಸಾಗಿಸಿರುತ್ತೇವೆ. ನಮಗೆ ಇಬ್ಬರು ಮಕ್ಕಳು ಹುಟ್ಟಿದ್ದು, ಮಗ ತೀರಿಕೊಂಡಿರುತ್ತಾನೆ. ಮಂಗಳಾ ಎಂಬ ಮಗಳು ಇದ್ದಾಳೆ. ಇವರಿಬ್ಬರನ್ನು ಬಿಟ್ಟು ಮೊದಲು ಒಂದು ಹೆಣ್ಣು ಮಗ ಆಗಿದ್ದು, ಅದು ತೀರಿಕೊಂಡಿತು ಎಂದರೆ ಸರಿ. ನನ್ನ ಮಗ 1982 ರಲ್ಲಿ ತೀರಿಕೊಂಡನು. ನನ್ನ ಮಗ ದಿನಾಂಕಃ10-09-1985 ರಂದು ತೀರಿಕೊಂಡನು ಎಂದರೆ ಸರಿ. ಸಾಕ್ಷಿ ಇಸವಿ ನಿಖರವಾಗಿ ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ನನ್ನ ಮಗ ತೀರಿಕೊಂಡಾಗ ಆತ 7 ವರ್ಷದವನು ಇದ್ದನು ಎಂದರೆ

ಸರಿಯಲ್ಲ. ಸಾಕ್ಷಿ 4 ವರ್ಷದವನು ಇದ್ದನು ಎಂದು ಹೇಳುತ್ತಾರೆ. ಹೃದಾಯಗತ ಆಗಿ ತೀರಿಕೊಂಡನು. ನನ್ನ ಮಗಳ ಮದುವೆ ಆಗಿದೆ. ಯಾವ ಇಸವಿಯಲ್ಲಿ ಆಗಿದೆ ಎಂದು ನನಗೆ ನೆನಪಿಲ್ಲ. ನಾನು ಯಾವುದೇ ಜವಬ್ದಾರಿ ವಹಿಸಿಕೊಳ್ಳದೇ ಇದ್ದ ಕಾರಣ ನನಗೆ ನನ್ನ ಮಕ್ಕಳ ಕುರಿತು ಯಾವುದೇ ಇಸವಿ ಗೊತ್ತಿಲ್ಲ ಎಂದರೆ ಸರಿಯಲ್ಲ.

ನನ್ನ ಹೆಂಡತಿಯ ತಂದೆಯ ಹೆಸರು ವೀರನಗೌಡ ಎಂದರೆ ಸರಿ. ನನಗೆ ವೀರನಗೌಡನ ಇವನ ಕುಟುಂಬ ಮತ್ತು ಆತನ ಆಸ್ತಿಗಳ ಬಗ್ಗೆ ಮಾಹಿತಿ ಇದೆ. ವೀರನಗೌಡ ಕುಟುಂಬದ ಹಿರಿಯನಾಗಿ ಆತನೇ ಮನೆತನದ ಹಿರಿತನ ಮಾಡುತ್ತಿದ್ದನು ಎಂದರೆ ಸರಿ. ವೀರನಗೌಡ ಇವನ ಹೆಸರಿನಲ್ಲಿ ಸುಮಾರು 16 ಎಕರೆ ಜಮೀನು, ಕಣ ಮತ್ತು ಮನೆ ಇದ್ದವು ಎಂದರೆ ಸರಿ. ಅವರು ತಮ್ಮ ಆಸ್ತಿಗಳನ್ನು ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ವೀರನಗೌಡ ತಾನು ಜೀವಂತ ಇದ್ದಾಗ ಮತ್ತು ನಂತರ ಆತನ ಮಕ್ಕಳು ಯಾವುದೇ ಆಸ್ತಿಯನ್ನು ಮಾರಿಲ್ಲ ಎಂದರೆ ಗೊತ್ತಿಲ್ಲ.

ವೀರನಗೌಡ ಈತ ದುಶ್ಚಟಕ್ಕೆ ಬಲಿಯಾಗಿ ನನ್ನ ಬಳಿ ಪದೇ ಪದೇ ಹಣ ಕೇಳುತ್ತಿದ್ದನು ಎಂದು ನನ್ನ ವಾದಪತ್ರದಲ್ಲಿ ತಿಳಿಸಿದ್ದೇನೆ. ಸಾಕ್ಷಿ 16 ಸಾವಿರ ಹಣ ಮತ್ತು 6 ತೊಲ ಬಂಗಾರ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಈ ಕುರಿತು ಯಾವುದೇ ದಾಖಲೆ ಹಾಜರುಪಡಿಸಿಲ್ಲ.ಈ ವಿಷಯವನ್ನು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಯಿಸಿಲ್ಲ. ವೀರನಗೌಡ ತೀರಿಕೊಂಡ ನಂತರ, ಆತನ ಹೆಸರಿಗೆ ಇದ್ದ ತೋಟಗಂಟೆ ಗ್ರಾಮದ 2 ಗುಂಟೆ ನಿವೇಶನವನ್ನು ನನ್ನ ಹೆಂಡತಿಗೆ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವೀರನಗೌಡ ದುಶ್ಚಟಕ್ಕೆ ಬಲಿಯಾಗಿದ್ದನು ಎಂದು ಒಂದು ಸುಳ್ಳು ಕಾರಣ ಹುಟ್ಟಿಸಿ ಈ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಸೇರಿದ 18 ಗುಂಟೆ ಜಮೀನನ್ನು ನಾನು 4 ನೇ ತರಗತಿಯಲ್ಲಿದ್ದಾಗ ಮಾರಿ, ರೂ.4 ಲಕ್ಷ ಹಣ ತಾವೇ ಪಡೆದುಕೊಂಡರು. ಈ ಕುರಿತು ಮಾರಾಟ ಆದ ಜಮೀನಿನ ಖರೀದಿ ಪತ್ರ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. 1974-75 ರಲ್ಲಿ ಎಂ.ಜಿ.ಸಿದ್ದನಗೌಡ ಎನ್ನುವವರಿಗೆ 3 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ. ಸದರಿ ಖರೀದಿ ಪತ್ರಕ್ಕೆ ನನ್ನ ಮಾವ ಸಹಿ ಮಾಡಿದ್ದಾನೋ ಇಲ್ಲವೋ ಗೊತ್ತಿಲ್ಲ.

3 ಎಕರೆ ಮತ್ತು 18 ಗುಂಟೆ ಜಮೀನನ್ನು ನಾನೇ ಮಾರಿ ಹಣ ಪಡೆದಿದ್ದರೂ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಕುಟುಂಬಕ್ಕೆ 8 ಎಕರೆ ಜಮೀನು ಇತ್ತು. ನನ್ನ ತಂದೆ ತಾನು ಜೀವಂತ ಇದ್ದಾಗ 1 ಎಕರೆ ಜಮೀನನ್ನು ಮಾರಿದ್ದರು ಎಂದರೆ ಸರಿಯಲ್ಲ. ನಾನು ವಯಸ್ಕರ ಆದ ನಂತರ, ನನ್ನ ಮದುವೆಯ ನಂತರ ಮತ್ತು ನನ್ನ ಮಗಳು ಹುಟ್ಟಿದ ನಂತರ ನಾನು 3 ಎಕರೆ ಮತ್ತು 18 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮನೆ ನಂಬರ್ 1196 ಬಾಗಿಲು ನಂಬರ್-887/7 ಇದನ್ನು ಮಾರಾಟ ಮಾಡಿಲ್ಲ.

ನಾನು ನನ್ನ ಮುಖ್ಯ ವಿಚಾರಣೆಯ 3 ನೇ ಪುಟದ 3 ನೇ ಪ್ಯಾರದಲ್ಲಿ ಮನೆಯನ್ನು 2012 ರಲ್ಲಿ ಮಾರಾಟ ಮಾಡಿದಾಗ ಪ್ರತಿವಾದಿಯರು ಅಡ್ಡಿ ಆತಂಕ ಮಾಡಿಲ್ಲ ಎಂದು ತಿಳಿಸಿದ್ದೇನೆ ಎಂದರೆ ಸರಿ. ಸಾಕ್ಷಿ ಅದು ನಮ್ಮ ಸಮಾಜದ ಜಮೀನು ನನ್ನ ಮುಖಾಂತರ ಮಾರಾಟ ಮಾಡಿಸಿರುತ್ತಾರೆ ಎಂದು ಹೇಳುತ್ತಾರೆ. ಹಾಗಾದರೆ ಈ ದಾವೆಯಲ್ಲಿ ಅದನ್ನು ಏಕೆ ಸೇರಿಸಿ ಘೋಷಣಾತ್ಮಕ ಪ್ರಾರ್ಥನೆ ಕೇಳಿದ್ದೀರಿ ಎಂದರೆ ಸಾಕ್ಷಿ ನನ್ನ ಅಣ್ಣ ತಮ್ಮಂದಿರ ಆಸ್ತಿ ಎಂದು ಹೇಳುತ್ತಾರೆ. ನಾನು ಎನ್.ಜಿ ಶಂಕರಗೌಡ ಎನ್ನುವವರಿಗೆ ನೊಂದಾಯಿತ ಅಲ್ಲದ ಖರೀದಿಪತ್ರ ಮಾಡಿಕೊಟ್ಟಿದ್ದೆನು. ದಿನಾಂಕಃ02-09-2012 ರಂದು ಮಾರಾಟ ಆಗಿದೆ ಎಂದು ಇದೆ ಎಂದರೆ ಸರಿ. ಆ ಪತ್ರದ ಪ್ರಕಾರ ನಾನು ರೂ. 40 ಸಾವಿರ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಪಂಚಾಯಿತಿಯಲ್ಲಿ ದಾವಾ ಐಟಂ ನಂಬರ್-5 ಶಂಕರಪ್ಪನ ಹೆಸರಿನಲ್ಲಿದೆ. ಹಾಗಾದರೆ ಈ ದಾವೆಯಲ್ಲಿ ಈ ಆಸ್ತಿಯನ್ನು ಏಕೆ ಸೇರಿಸಿದಿರಿ ಎಂದರೆ ಸಾಕ್ಷಿ ನನ್ನ ವಕೀಲರು ಬರೆದರು ಎಂದು ಹೇಳುತ್ತಾರೆ.

ಕೆ.ಜಿ ಹೇಮಪ್ಪ ನನ್ನ ಸಂಬಂಧಿ ಇರುತ್ತಾನೆ. ಆತ ತೀರಿಕೊಂಡಿರುತ್ತಾನೆ. ಕರಿಬಸಯ್ಯ ಮಠದ ಈತ ತೀರಿಕೊಂಡಿರುತ್ತಾನೆ. ಭುಜಂಗರಾವ್ ನಾಡಿಗರ್ ಸಹ ತೀರಿಕೊಂಡಿರುತ್ತಾನೆ. ದಿನಾಂಕಃ24-05-1982 ರ ಹಕ್ಕು ಬಿಡುಗಡೆ ಪತ್ರಕ್ಕೆ ವೀರನಗೌಡ ಮಾಹಿತಿ ಕೊಟ್ಟರು. ನನಗೆ ಮಗನಿಗೆ ಮಾಡುತ್ತೇನೆ ಎಂದು ಹೇಳಿದರು, ನಾನು ಸಹಿ ಮಾಡಿ ಬಂದೆನು. ವೀರನಗೌಡನರು ಆ ಸಮಯದಲ್ಲಿ ಇದ್ದ ಬಗ್ಗೆ ತೋರಿಸಲು ದಾಖಲೆ ಇಲ್ಲ. ವೀರನಗೌಡ

ಈ ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ನಾನು ನೋಡಿಲ್ಲ. ಈ ಹಕ್ಕು ಬಿಟ್ಟು ಕೊಟ್ಟ ಪತ್ರ ಮಾಡಿಕೊಟ್ಟ ನಂತರ, ಸುಮಾರು 40 ವರ್ಷಗಳ ನಂತರ ಈ ದಾವೆ ಮಾಡಿದ್ದೇನೆ. 2016 ರಲ್ಲಿ ನಾನು ಪಹಣಿ ತೆಗಿಸಲು ಹೋದಾಗ ಗೊತ್ತಾಯಿತು. 40 ವರ್ಷಗಳ ನಂತರ ನನಗೆ ಹಕ್ಕು ಬಿಟ್ಟು ಪತ್ರ ಮಾಡಿಕೊಟ್ಟಿದ್ದಾರೆ ಎಂದು ಗೊತ್ತಾಯಿತು. ನಾನು ಪ್ರತಿವಾದಿ ಮತ್ತು ನನ್ನ ಮಗನಿಗೆ ರೂ.2 ಸಾವಿರ ಪಡೆದುಕೊಂಡು, ಹಕ್ಕು ಬಿಟ್ಟುಕೊಟ್ಟಿದ್ದರು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಗನಿಗೆ ಮಾಡುತ್ತೇನೆ ಎಂದು ಹೇಳಿ ನನ್ನನ್ನು ಕರೆದುಕೊಂಡು ಹೋದರು ಆದರೆ ಹೆಸರಿಗೆ ಮಾತ್ರ ಮಾಡಿರುತ್ತಾರೆ. ನನ್ನ ಮಗ ಮತ್ತು ಹೆಂಡತಿಯ ಹೆಸರಿಗೆ ಈ ದಾಖಲೆ ಆಯಿತು ಎಂದರೆ ಸರಿ.

ನನ್ನ ಮಗ ಮದುವೆಯಾಗದೇ ತೀರಿಕೊಂಡ ಕಾರಣ ಪ್ರತಿವಾದಿ ಮಾತ್ರ ಆತನ ವಾರಸುದಾರಳು ಎಂದರೆ ಸರಿಯಲ್ಲ. ಈ ದಾಖಲೆಯಾದ 40 ವರ್ಷಗಳ ಒಳಗೆ ಈ ದಾಖಲೆಯನ್ನು ರದ್ದುಗೊಳಿಸಲು ನಿಮಗೆ ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ಇರಲಿಲ್ಲ ಪಹಣಿ ಬರದೇ ಇದ್ದಾಗ ಗೊತ್ತಾಯಿತು ಎಂದು ಹೇಳುತ್ತಾರೆ. ಸದರಿ ದಾಖಲೆಯ ಪ್ರಕಾರ ದಾವಾ ಆಸ್ತಿಗಳ ಸ್ವಾಧೀನ ಸಹ ಅಂದೇ ಕೊಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ನಾನೇ ಬರೆದುಕೊಟ್ಟ ನೊಂದಾಯಿತ ದಾಖಲೆಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮಗಳ ಮದುವೆ ಹಾಲನಗೌಡ ಎನ್ನುವವರ ಜೊತೆಗೆ ಆಗಿದೆ. ನಾನು ಮದುವೆಗೆ ಹೋದ ಬಗ್ಗೆ ದಾಖಲೆ ಇಲ್ಲ. ನನ್ನ ಮಗಳ ಆರೋಗ್ಯ ಸರಿ ಇಲ್ಲ ಎಂದರೆ ಸರಿ. ಆಕೆಗೆ ಏನು ಕಾಯಿಲೆ ಇದೆ ಎನ್ನುವುದು ಗೊತ್ತಿಲ್ಲ. ಆಕೆಗೆ 4 ಸಲ ಶಸ್ತ್ರ ಚಿಕಿತ್ಸೆ ಆಗಿದೆ ಎಂದರೆ ಗೊತ್ತಿಲ್ಲ. ನಾನು ಎನ್.ಜಿ ಶಂಕರಗೌಡ ಎನ್ನುವವರ ಮಾತುಕೇಳಿ ನಾನು ಹಕ್ಕು ಬಿಟ್ಟುಕೊಟ್ಟ ಪತ್ರ ಮಾಡಿಕೊಟ್ಟಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್-4 ಜಮೀನು ನನ್ನ ಸ್ವಾಧೀನದಲ್ಲಿದೆ. ನಾನು ಯಾವುದೇ ದಾವಾ ಆಸ್ತಿಗಳ ಸ್ವಾಧೀನದಲ್ಲಿ ಇಲ್ಲ, ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ24-05-1982 ರಿಂದ ಸ್ವಾಧೀನದಲ್ಲಿ ಇಲ್ಲದೇ ಇದ್ದರೂ, ಸುಳು ದಾವೆ ಮಾಡಿ

ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗಳಿಗೆ ಯಾವುದೇ ರೀತಿ ಹಕ್ಕು ದಾರ ಇಲ್ಲ ಎಂದರೆ ಸರಿಯಲ್ಲ. ಈಗ ದಾವಾ ಐಟಂ ನಂಬರ್-5 ರ ಮೌಲ್ಯ ಸುಮಾರು 25 ಲಕ್ಷ ಇದೆ. 2016 ರಲ್ಲಿ ಸುಮಾರು 20 ಲಕ್ಷ ಇರಬಹುದು. ಐಟಂ ನಂಬರ್-1 ರ ಮೌಲ್ಯ ಸುಮಾರು 30 ಸಾವಿರ ಇರಬಹುದು. ಪ್ರತಿ ಎಕರೆಗೆ 30 ಸಾವಿರ 2016 ರಲ್ಲಿ ಇರಬಹುದು. 2016 ರಲ್ಲಿ 1 ಎಕರೆಗೆ 1 ಲಕ್ಷ 40 ಸಾವಿರ ಇತ್ತು ಎಂದರೆ ಗೊತ್ತಿಲ್ಲ. ಐಟಂ ನಂಬರ್-5 ರ ಮನೆಯ ಬೆಲೆ ಸುಮಾರು 1 ಲಕ್ಷ ಇರಬಹುದು. ದಾವಾ ಆಸ್ತಿಗಳ ಕುರಿತು ಸರಿಯಾದ ಮೌಲ್ಯಮಾಪನ ಮಾಡದೇ ಸರಿಯಾದ ನ್ಯಾಯಾಲಯದ ಶುಲ್ಕ ಭರಿಸದೇ ಈ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.